## ಏಕದಂತ

ಕ್ಷತ್ರಿಯರ ಇಲ್ಲವಾಗಿಸುವ ಪ್ರತಿಜ್ಞೆಗೈದ ಪರಶುರಾಮನಿಗೂ ಹಾಗೂ ಗಣಪತಿಗೂ ಒಂದು ಸಲ ಯುದ್ಧವಾಯಿತು. ಪರಶುರಾಮನು ಶಿವನಿಂದ ತಾನು ಪಡೆದ ಒಂದು ಅಸ್ತ್ರವನ್ನೇ ಗಣಪತಿಯ ಮೇಲೆ ಪ್ರಯೋಗಿಸಿದನು. ಆ ಭಯಂಕರವಾದ ಅಸ್ತ್ರವನ್ನು ಗಣಪತಿಯು ತನ್ನ ಹಲ್ಲಿನಿಂದ ನಿವಾರಿಸಿದನು. ಅವನದೊಂದು ಹಲ್ಲು ಮುರಿದುಹೋಯಿತು. ಅವತ್ತಿನಿಂದ ಗಣಪತಿಯು 'ಏಕದಂತ'ನಾದನು.



ತಲೆಯನ್ನು ಕತ್ತರಿಸಿಕೊಂಡು ಬನ್ನಿರಿ ಎಂದು ಆಜ್ಞಾಪಿಸಿದನು. ಭೂಲೋಕದಲ್ಲಿ ಉತ್ತರ ದಿಕ್ಕಿಗೆ ತಲೆ ಮಾಡಿ ಮಲಗಿಕೊಂಡಿದ್ದ ಒಂದು ಆನೆಯ ತಲೆಯನ್ನು ತಂದು ಮಹಾದೇವನಿಗೆ ಒಪ್ಪಿಸಿದರು. ಶಿವನು ಅದನ್ನು ಕಾವಲುಗಾರ ಮೂರ್ತಿಯ ದೇಹಕ್ಕೆ ಸೇರಿಸಿ ಪ್ರಾಣದಾನ ಮಾಡಿದನು. ಮಾನವ ದೇಹ, ಆನೆಯ ತಲೆಯುಳ್ಳ ಮೂರ್ತಿ ನಿರ್ಮಾಣವಾಯಿತು. ಜೊತೆಗೆ ಜೀವಕಳೆಯನ್ನೂ ಪಡೆಯಿತು. ಆಜ್ಞಾಧಾರಕತ್ವಕ್ಕಾಗಿ ತನ್ನ ಪ್ರಾಣವನ್ನೇ ಪಣಕ್ಕೆ ನೀಡಲು ಹಿಂದೆಮುಂದೆ ನೋಡದ್ದಕ್ಕಾಗಿ ಶಿವನು ಅವನನ್ನು ಗಣಂಗಳ ಅಧಿಕಾರಿಯನ್ನಾಗಿ ಮಾಡಿದನು. ಗಣಂಗಳ ಅಧಿಪತಿಯು 'ಗಣಪತಿ'ಯಾದನು.

### ಡೊಳ್ಳು ಹೊಟ್ಟೆ ಗಣಪ

ಒಂದು ದಿನ ಗಣಪತಿಯು ಭಕ್ತರ ಮನೆಗೆ ಹೋಗಿ ಮೋದಕಗಳನ್ನು ಸೇವಿಸಿದನು. ಅಲ್ಲಿಂದ ತನ್ನ ವಾಹನವಾದ ಮೂಷಿಕವನ್ನೇರಿ ಬೀದಿಯಲ್ಲಿ ಹೊರಟನು. ಮಾರ್ಗದಲ್ಲಿ ಇಲಿಯು ಏನನ್ನೋ ಎಡವಿತು. ಆಗ ಭಾರವಾದ ಹೊಟ್ಟೆಯ ಗಣಪತಿಯು ಧೊಪ್ಪನೆ ಕೆಳಗೆ ಬಿದ್ದು, ಹೊಟ್ಟೆಯೊಡೆಯಿತು. ಆಗ ಅವನ ಹೊಟ್ಟೆಯೊಳಗಿದ್ದ ಮೋದಕಗಳೆಲ್ಲ ಹೊರಬೀಳತೊಡಗಿದವು. ಗಣಪತಿಯು ಕೂಡಲೇ ಒಂದು ಹಾವನ್ನು ತನ್ನ ಹೊಟ್ಟೆಗೆ ಸುತ್ತಿಕೊಂಡು ಬಿಟ್ಟನು. ಈ ದೃಶ್ಯವು ಆಕಾಶದಲ್ಲಿಯ ಚಂದ್ರನಿಗೆ ಬಲು ಮೋಜಿನದಾಗಿ ಕಂಡುಬಂದಿತು. ಆಗ ಅವನು ಕಿಲಕಿಲನೆ ನಕ್ಕನು. ತಾನು ಬಿದ್ದುದಕ್ಕಿಂತ ಚಂದ್ರನು ನಕ್ಕಿದ್ದನ್ನು ಕಂಡು ಗಣಪತಿಗೆ ಬಹಳ ನೋವಾಯಿತು. ಜೊತೆಗೆ ಕೋಪವೂ ಬಂದಿತು. ಕೂಡಲೇ ನೀನು ಎಂದೆಂದಿಗೂ ಮರೆಯಾಗಿ ಹೋಗು ಎಂದು ಚಂದ್ರನಿಗೆ ಶಾಪವಿತ್ತನು. ಚಂದ್ರನಿಗೆ ಪಶ್ಚಾತ್ತಾಪವಾಗತೊಡಗಿತು. ಅತ್ಯಂತ ಭಕ್ತಿಯಿಂದ ಗಣಪತಿಯನ್ನು ಪೂಜಿಸಿದನು, ತನಗಿತ್ತ ಶಾಪವನ್ನು ಹಿಂತಿರುಗಿಸಿಕೊಳ್ಳಲು ಪ್ರಾರ್ಥಿಸಿಕೊಂಡನು. ಭಾದ್ರಪದ ಶುದ್ಧ ಚತುರ್ಥಿಯ ದಿನ ಅರ್ಥಾತ್ ನನ್ನ ಆರಾಧನೆಯ ದಿನ ಮಾತ್ರ ಯಾರೂ ನಿನ್ನನ್ನು ನೋಡದಿರಲಿ. ಒಂದು ವೇಳೆ ನೋಡಿದರೆ ಅವರಿಗೆ ಇಲ್ಲಸಲ್ಲದ ಅಪವಾದಗಳು ಬರಲಿ ಎಂದು ಶಾಪದಲ್ಲಿ ಪರಿವರ್ತನೆಯನ್ನು ಮಾಡಿದನು. ಚಂದ್ರನು ಶಾಪದಿಂದ ಮುಕ್ತನಾದನು.

ಈ ಪುಸ್ತಕದಲ್ಲಿ ಬರುವ 'ಬಿದ್ದ ಪೆಟ್ಟಿಗಿಂತ ನಕ್ಕ ಪೆಟ್ಟು ಹೆಚ್ಚು' ಎಂಬ ವಾಕ್ಯ, ಅಮ್ಮ ಇನ್ಯಾವುದೋ ಸಂದರ್ಭದಲ್ಲಿ ಹೇಳತ್ತಿದ್ದ 'ನಮ್ಮವರು ಅಂದ್ (ಅನ್ನುವುದು) ಹೇಳಿದ್ರಂತೆ, ಕಂಡವರು ನಕ್ಕು ಹೇಳಿದ್ರಂತೆ' ಗಾದೆಗೆ ಹೊಂದಿಕೆಯಾಗುತ್ತಿತ್ತು. ಹೀಗೆ ತಮಾಷೆಯಾಗಿ ಈ ಕಥೆಗಳಲ್ಲಿ ಯೋಚಿಸುತ್ತಿದ್ದ ವಿಷಯಗಳು ಅಂದರೆ, ಯಾಕೆ ಪಾರ್ವತಿ ಅಪರೂಪಕ್ಕೆ ಸ್ನಾನ ಮಾಡುತ್ತಿದ್ದಳೆ? ಅವಳ ಮೈಯಲ್ಲಿ ಒಂದು ಮೂರ್ತಿ ಮಾಡುವಷ್ಟು ಕೊಳೆ ಇರುತ್ತಿತ್ತೇ? ಆ ಮೂರ್ತಿಯನ್ನು ಕೊಲ್ಲುವಷ್ಟು ಕೋಪ ಶಿವನಿಗೆ ಏಕೆ ಬಂದಿತು? ಆ ಮೂರ್ತಿಯ ತಲೆಯನ್ನು ಕತ್ತರಿಸಿದ ಮೇಲೆ, ಮುಂದೆ ಆ ಮೂರ್ತಿಗೆ ಪುನರ್ಜೀವ ಕೊಡಬೇಕೆಂದು ಕೊಂಡಾಗ ಮೊದಲು ಕತ್ತರಿಸಲಾದ ರುಂಡ ಏನಾಯಿತು? ಅದನ್ನು ಉಳಿದಿದ್ದ ಮುಂಡಕ್ಕೆ ಸೇರಿಸಲು ಏಕಾಗಲಿಲ್ಲ? ಉತ್ತರ ದಿಕ್ಕಿಗೆ ತಲೆ ಮಾಡಿ ಮಲಗಿರುವ ಯಾವ ಮನುಷ್ಯರೂ ಸಿಕ್ಕದೆ ಒಂದು ಪ್ರಾಣಿಯ ತಲೆಯನ್ನೇ ಏಕೆ ತರಬೇಕಾಯಿತು? ಹೀಗೆ ಹಲವಾರು ಪ್ರಶ್ನೆಗಳು. ಇವೆಲ್ಲಾ ಪ್ರಶ್ನೆಗಳು ಇದ್ದರೂ ಸಹ ಇದನ್ನೆಲ್ಲಾ ಯಾವತ್ತೂ ಚರ್ಚೆ ಮಾಡುತ್ತಿರುತ್ತಿರಲಿಲ್ಲ. ಆದರೆ ಗಣೇಶ ಮಹಿಮೆ ಪುಸ್ತಕದ ಕಥೆಯನ್ನು ಮಾತ್ರ ತಪ್ಪದೆ ಹಬ್ಬದ ದಿನ ಓದುತ್ತಿದ್ದೆವು.

ಹಾಗಂತ ನಾವು ಈ ಸಂಶಯಗಳನ್ನು ನಿವಾರಿಸಿಕೊಳ್ಳದೇ ಕುರುಡಾಗಿ ಕಥೆ ಓದುತ್ತಿದ್ದೆವು ಎಂದೇನೂ ಅಲ್ಲ. ಆದರೆ ಇವು ಪುರಾಣ ಕಥೆಗಳು. ದೈವಿಕ ಭಾವನೆ ಇರಬೇಕು ಅಷ್ಟೆ. ಅರ್ಥ ತರ್ಕಗಳಿಗೆ ಆಸ್ಪದ ಇಲ್ಲ. ಆದರೂ ನನಗೆ ತಿಳಿದಮಟ್ಟಿಗೆ ಅಮ್ಮ ಚಿಕ್ಕ ವಯಸ್ಸಿನಲ್ಲೇ ಇಂತಹ ವಿಷಯಗಳ ಬಗ್ಗೆ ತಿಳಿವಳಿಕೆ ಕೊಡುತ್ತಿದ್ದರು. ಅಮ್ಮ ಬೇರೆ ಬೇರೆ ಸಂದರ್ಭಗಳಲ್ಲಿ ಹೇಳಿದ್ದ ವಿಷಯಗಳು, ಮುಖ್ಯವಾಗಿ 'ಗಣಪತಿ'ಯ ಜನನದ ಕಥೆಯ ಬಗ್ಗೆ ತಿಳಿಸಿಕೊಟ್ಟ ವಿವರ ಹೀಗಿದೆ. ಶಕ್ತಿ ಸ್ವರೂಪಿಣಿಯಾದ ಮತ್ತು ಜಗನ್ಮಾತೆಯಾದ ಪಾರ್ವತಿಯು ದುಷ್ಟರನ್ನು ಶಿಕ್ಷಿಸಲು, ಶಿಷ್ಟರನ್ನು ರಕ್ಷಿಸಲು ಹಲವು ಅವತಾರಗಳನ್ನು ತಾಳುವಳು. ದುರ್ಗಿಯಾಗಿ, ಕಾಳಿಯಾಗಿ, ಚಾಮುಂಡಿಯಾಗಿ ಅನೇಕ ದುಷ್ಟ ರಾಕ್ಷಸರನ್ನು ಸಂಹರಿಸುವಳು. ಪ್ರತಿಬಾರಿ ದುಷ್ಟಶಕ್ತಿಗಳನ್ನು ಸಂಹರಿಸಿದಾಗಲೂ ಅಗಾಧವಾದ ರಕ್ತಸಿಕ್ತ ಕೊಳೆ ಮೈಮೇಲೆ ಹೊಂದುವಳು. ಈ ಕೊಳೆ ತೊಳೆದುಕೊಳ್ಳಲು ಸ್ನಾನ ಮಾಡುವ ನೆಪ. ಹೊರಗೆ ಬಂದ ಕೊಳೆಯನ್ನು ನೀಗಿಸುವ ಮತ್ತು ಶುಭ್ರವಾಗಿಸುವ ಕೆಲಸ ಶಿವನದು. ಈ ಸಂದರ್ಭದಲ್ಲೇ ಶಿವ ಪಾರ್ವತಿ ಮಾಡಿಟ್ಟಿದ್ದ ಮೂರ್ತಿಯ ಶಿರವನ್ನು ಬೇರ್ಪಡಿಸಿದ್ದು, ಇತರೆ ಕೊಳೆ ಜೊತೆ ಅದು ಕರಗಿ ಹೋಗಿದ್ದು, ಬೇರೆ ತಲೆಯನ್ನೇ ತರಬೇಕಾದ ಸಂದರ್ಭ ಬಂದಿದ್ದುದು. ಯಾವ ಮನುಷ್ಯರೂ ಉತ್ತರ ದಿಕ್ಕಿಗೆ ತಲೆ ಹಾಕಿ ಮಲಗಿಕೊಳ್ಳುವ ಸಂಪ್ರದಾಯ ಇಲ್ಲದುದರಿಂದ ಯಾವ ಮನುಷ್ಯರ ಶಿರವೂ ಸಿಕ್ಕದೆ ಪ್ರಾಣಿಗಳ ಶಿರ ಮಾತ್ರ ಸಿಕ್ಕಲಾಗಿ ಅವುಗಳಲ್ಲಿ ಆನೆಯ ತಲೆ ಮಾತ್ರ ಅಲ್ಲಿ ಉಳಿದಿದ್ದ ಮುಂಡಕ್ಕೆ ಹೊಂದುತ್ತಿದ್ದುದರಿಂದ ಅದನ್ನೇ ಸೇರಿಸಿ ಗಣಪತಿಯ ಜನನಕ್ಕೆ ಕಾರಣ ಮಾಡಲಾಯಿತು. ಹೀಗೆ ಗಣಪತಿಯ ಜನನಕ್ಕೆ ಒಂದು ತರ್ಕಬದ್ಧವಾದ ವಿವರಣೆ ದೊರಕಿತು. ■



